GURU DEEKSHAA IAS

Azadi Ka Amrit Mahotsav

# POLITY ಗುರು

## ನಿಮ್ಮ ನಾಗರಿಕ ಸೇವಾ ಪ್ರಯಾಣಕ್ಕೆ ಮಾರ್ಗದರ್ಶಕ






FOR DAILY FREE CURRENT AFFAIRS
Follow Our Youtube Channel

Guru Deekshaa IAS

PRICE ₹150/-

# Indian Polity

1. ಸಂವಿಧಾನದ ಪ್ರಮುಖ ಲಕ್ಷಣಗಳು ........ 3

2. ಪರಿಚ್ಛೇದಗಳು ........ 8

3. ಸಂವಿಧಾನದ ಪೀಠಿಕೆ ........ 11

4. ಒಕ್ಕೂಟ ಮತ್ತು ಅದರ ಪ್ರದೇಶಗಳು ........ 13

5. ಪೌರತ್ವ ........ 15

6. ಮೂಲಭೂತ ಹಕ್ಕುಗಳು ........ 17

7. ರಾಜ್ಯ ನೀತಿ ನಿರ್ದೇಶಕ ತತ್ವಗಳು ........ 32

8. ಮೂಲಭೂತ ಕರ್ತವ್ಯಗಳು ........ 36

9. ಸಂವಿಧಾನದ ತಿದ್ದುಪಡಿ ........ 37

10. ಮೂಲ ರಚನೆ ........ 39

11. ಒಕ್ಕೂಟ ವ್ಯವಸ್ಥೆ ........ 40

12. ತುರ್ತು ನಿಬಂಧನೆಗಳು ........ 42

13. ಕೇಂದ್ರ-ರಾಜ್ಯ ಸಂಬಂಧಗಳು ........ 48

14. ಅಂತರ ರಾಜ್ಯ ಸಂಬಂಧಗಳು ........ 55

15. ಕಾರ್ಯಾಂಗ ........ 57

16. ಶಾಸಕಾಂಗ ........ 70

17. ನ್ಯಾಯಾಂಗ ........ 91

18. ಸ್ಥಳೀಯ ಸರ್ಕಾರ ........ 98

19. ಕೇಂದ್ರಾಡಳಿತ ಪ್ರದೇಶಗಳು ........ 108

20. ಸಾಂವಿಧಾನಿಕ ಸಂಸ್ಥೆಗಳು ........ 112

21. ಸಂವಿಧಾನೇತರ ಸಂಸ್ಥೆಗಳು ........ 120

22. ಇತರೆ ........ 126

23. ಚಾರಿತ್ರಿಕ ಹಿನ್ನೆಲೆ ........ 128

# 1. ಸಂವಿಧಾನದ ಪ್ರಮುಖ ಲಕ್ಷಣಗಳು

## 1. ಸುದೀರ್ಘವಾದ ಲಿಖಿತ ಸಂವಿಧಾನ

ಆರಂಭದಲ್ಲಿ ಸಂವಿಧಾನವನ್ನು 22 ಭಾಗಗಳಾಗಿ ವಿಂಗಡಿಸಲಾಗಿದ್ದು, 395 ವಿಧಿಗಳು, 8 ಪರಿಚ್ಛೇದಗಳನ್ನು ಹೊಂದಿತ್ತು. ಪ್ರಸ್ತುತ ಸಂವಿಧಾನವು 25 ಭಾಗಗಳು, 12 ಪರಿಚ್ಛೇದಗಳು ಮತ್ತು 465 ವಿಧಿಗಳನ್ನು ಒಳಗೊಂಡಿದೆ.

### ಇದಕ್ಕೆ ಕಾರಣಗಳೆಂದರೆ :

1. ಭೌಗೋಳಿಕ ಅಂಶಗಳು : ಭಾರತದ ವಿಶಾಲತೆ ಮತ್ತು ವೈವಿಧ್ಯತೆ
2. ಐತಿಹಾಸಿಕ ಅಂಶಗಳು : ಭಾರತ ಸರ್ಕಾರ ಕಾಯಿದೆ, 1935 ರ ಪ್ರಭಾವ
3. ಒಕ್ಕೂಟ ಮತ್ತು ರಾಜ್ಯ ಎರಡಕ್ಕೂ ಸೇರಿ ಒಂದೇ ಸಂವಿಧಾನ
4. ಸಂವಿಧಾನ ಸಭೆಯಲ್ಲಿ ಕಾನೂನು ತಜ್ಞರ ಪ್ರಾಬಲ್ಯ

## 1. ವಿವಿಧ ಮೂಲಗಳಿಂದ ಪ್ರೇರಣೆ

- ಡಾ. ಬಿ.ಆರ್. ಅಂಬೇಡ್ಕರ್ ಅವರು 'ಜಗತ್ತಿನ ತಿಳಿದಿರುವ ಎಲ್ಲಾ ಸಂವಿಧಾನಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ಬಳಿಕ' ಭಾರತದ ಸಂವಿಧಾನವನ್ನು ರಚಿಸಲಾಗಿದೆ ಎಂದು ಹೆಮ್ಮೆಯಿಂದ ಹೇಳಿದ್ದಾರೆ.
- ಸಂವಿಧಾನದ ರಚನಾತ್ಮಕ ಭಾಗವು ಭಾರತ ಸರ್ಕಾರ ಕಾಯಿದೆ 1935 ರಿಂದ ಪ್ರಭಾವಿತವಾಗಿದೆ. (ಅರ್ಧಕ್ಕಿಂತ ಹೆಚ್ಚು ನಿಬಂಧನೆಗಳು ಒಂದೇ ಆಗಿವೆ).
- ಸಂವಿಧಾನದ ತಾತ್ವಿಕ ಭಾಗ (ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನೀತಿ ನಿರ್ದೇಶಕ ತತ್ವಗಳು) ಕ್ರಮವಾಗಿ ಅಮೇರಿಕನ್ ಮತ್ತು ಐರಿಶ್ ಸಂವಿಧಾನಗಳಿಂದ ಸ್ಫೂರ್ತಿ ಪಡೆದಿವೆ.
- ಇನ್ನು, ರಾಜಕೀಯ ಭಾಗದ ಮೇಲೆ ಬ್ರಿಟಿಷ್ ಸಂವಿಧಾನದ (ಕ್ಯಾಬಿನೆಟ್ ಸರ್ಕಾರದ ತತ್ವ, ಶಾಸಕಾಂಗ ಮತ್ತು ಕಾರ್ಯಾಂಗಗಳ ನಡುವಿನ ಸಂಬಂಧ) ಛಾಯೆಯಿದೆ.

## 2. ನಿಷ್ಠುರತೆ ಮತ್ತು ನಮ್ಯತೆಯ ಮಿಶ್ರಣ

### ನಿಷ್ಠುರತೆ : (ಅಮೆರಿಕಾ ಸಂವಿಧಾನದ ಪ್ರಭಾವ)

ವಿಧಿ 368 ಎರಡು ಬಗೆಗಳಲ್ಲಿ ಸಂವಿಧಾನವನ್ನು ತಿದ್ದುಪಡಿಗೊಳಿಸಲು ಅನುಮತಿ ನೀಡುತ್ತದೆ :

- ಸಂಸತ್ತಿನ ವಿಶೇಷ ಬಹುಮತ – (ಸದನದಲ್ಲಿ ಪ್ರಸ್ತುತ ಹಾಜರಿರುವ ಒಟ್ಟೂ ಸದಸ್ಯರ 2/3ರಷ್ಟು ಬಹುಮತ ಮತ್ತು ಸದನದ ಒಟ್ಟೂ ಬಲದ 50% ಕ್ಕಿಂತ ಹೆಚ್ಚು ಬೆಂಬಲ)
- ಸಂಸತ್ತಿನ ವಿಶೇಷ ಬಹುಮತ ಮತ್ತು ಅರ್ಧದಷ್ಟು ರಾಜ್ಯಗಳ ಸರಳ ಬಹುಮತದ ಅನುಮೋದನೆ

### ನಮ್ಯತೆ : (ಬ್ರಿಟಿಷ್ ಸಂವಿಧಾನದಿಂದ ಪ್ರೇರಿತ)

- ಸರಳ ಬಹುಮತ : ಸಂವಿಧಾನದ ಕೆಲವು ನಿಬಂಧನೆಗಳನ್ನು ಸಾಮಾನ್ಯ ಶಾಸಕಾಂಗ ಪ್ರಕ್ರಿಯೆಯ ರೀತಿಯಲ್ಲಿಯೇ ತಿದ್ದುಪಡಿ ಮಾಡಬಹುದು. (ಇವುಗಳನ್ನು ವಿಧಿ 368ರ ಅಡಿಯಲ್ಲಿ ತಿದ್ದುಪಡಿ ಎಂದು ಪರಿಗಣಿಸಲಾಗುವುದಿಲ್ಲ)

## 3. ಏಕೀಕೃತ ಪಕ್ಷಪಾತದೊಂದಿಗೆ ಒಕ್ಕೂಟ ವ್ಯವಸ್ಥೆ

### ಒಕ್ಕೂಟದ ವೈಶಿಷ್ಟ್ಯಗಳು :

- ಉಭಯ ( ಕೇಂದ್ರ ಮತ್ತು ರಾಜ್ಯ) ಸರ್ಕಾರಗಳು,
- ಅಧಿಕಾರಗಳ ವಿಭಜನೆ,
- ಲಿಖಿತ ಸಂವಿಧಾನ,
- ಸಂವಿಧಾನದ ಪ್ರಾಬಲ್ಯ,
- ಸಂವಿಧಾನದ ನಿಷ್ಠುರತೆ,
- ಸ್ವತಂತ್ರ ನ್ಯಾಯಾಂಗ,
- ಉಭಯ ಸದಸ್ಯತ್ವ

### ಏಕತೆಯ ವೈಶಿಷ್ಟ್ಯಗಳು :

- ಬಲಿಷ್ಠ ಕೇಂದ್ರ ಸರ್ಕಾರ,
- ಏಕ ಸಂವಿಧಾನ,
- ಏಕ ಪೌರತ್ವ,
- ಸಮಗ್ರ ನ್ಯಾಯಾಂಗ,
- ಕೇಂದ್ರದಿಂದ ರಾಜ್ಯಪಾಲರ ನೇಮಕ,
- ಅಖಿಲ ಭಾರತ ಸೇವೆಗಳು,
- ತುರ್ತುಪರಿಸ್ಥಿತಿ ನಿಬಂಧನೆಗಳು

## 4. ಸಂಸದೀಯ ರೂಪದ ಸರ್ಕಾರ

- ಮೂಲಭೂತ ತತ್ವ : ಶಾಸಕಾಂಗ ಮತ್ತು ಕಾರ್ಯಾಂಗಗಳ ನಡುವಿನ ಸಹಕಾರ ಮತ್ತು ಸಮನ್ವಯತೆ.

### ವೈಶಿಷ್ಟ್ಯಗಳು :

- ನಾಮಮಾತ್ರ ಮತ್ತು ನೈಜ ಕಾರ್ಯನಿರ್ವಾಹಕರ ಉಪಸ್ಥಿತಿ,
- ಬಹುಮತದ ಆಡಳಿತ,
- ಶಾಸಕಾಂಗಕ್ಕೆ ಕಾರ್ಯಾಂಗದ ಸಾಮೂಹಿಕ ಜವಾಬ್ದಾರಿ,
- ಮಂತ್ರಿಗಳ ಉಭಯ ಸದಸ್ಯತ್ವ,
- ಪ್ರಧಾನ ಮಂತ್ರಿ ಅಥವಾ ಮುಖ್ಯಮಂತ್ರಿಯ ನಾಯಕತ್ವ,
- ಕೆಳಮನೆಯ ವಿಸರ್ಜನೆ (ಲೋಕಸಭೆ ಅಥವಾ ವಿಧಾನಸಭೆ)

## 5. ಸಂಸದೀಯ ಸಾರ್ವಭೌಮತ್ವ ಮತ್ತು ನ್ಯಾಯಾಂಗದ ಪ್ರಾಬಲ್ಯಗಳ ಸಮನ್ವಯ

- ಭಾರತೀಯ ಸಂಸದೀಯ ವ್ಯವಸ್ಥೆಯು ಬ್ರಿಟಿಷ್ ಮೂಲದ ಸಂಸದೀಯ ಸಾರ್ವಭೌಮತ್ವ ತತ್ವ ಮತ್ತು ಅಮೆರಿಕಾದ ನ್ಯಾಯಾಂಗ ಪ್ರಾಬಲ್ಯ ತತ್ವಗಳ ನಡುವಿನ ಸೂಕ್ತ ಸಮನ್ವಯವಾಗಿದೆ.
- ಒಂದು ಕಡೆ ಸುಪ್ರೀಂ ಕೋರ್ಟ್ ತನ್ನ ನ್ಯಾಯಾಂಗ ಪರಿಶೀಲನೆಯ ಅಧಿಕಾರದ ಮೂಲಕ ಸಂಸದೀಯ ಕಾನೂನುಗಳನ್ನು ಅಸಂವಿಧಾನಿಕ ಎಂದು ಘೋಷಿಸಬಹುದು.
- ಇನ್ನೊಂದು ಕಡೆ, ಸಂಸತ್ತು ತನ್ನ ಸಾಂವಿಧಾನಿಕ ಅಧಿಕಾರದ ಮೂಲಕ ಸಂವಿಧಾನದ ಪ್ರಮುಖ ಭಾಗಗಳನ್ನು ತಿದ್ದುಪಡಿ ಮಾಡಬಹುದು.

## 6. ಸಮಗ್ರ ಮತ್ತು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ

- ಸುಪ್ರೀಂ ಕೋರ್ಟ್ ನಾಗರಿಕರ ಮೂಲಭೂತ ಹಕ್ಕುಗಳ ಮತ್ತು ಸಮಗ್ರ ಸಂವಿಧಾನದ ರಕ್ಷಕನಾಗಿ ಪಾತ್ರ ನಿರ್ವಹಿಸುತ್ತದೆ.
- ಸಂಯೋಜಿತ ವ್ಯವಸ್ಥೆ : ಸುಪ್ರೀಂ ಕೋರ್ಟ್ + ಹೈ ಕೋರ್ಟ್ + ಜಿಲ್ಲಾ ಮತ್ತು ಇತರ ನ್ಯಾಯಾಲಯಗಳು ಕೇಂದ್ರ ಮತ್ತು ರಾಜ್ಯಗಳ ಕಾನೂನುಗಳನ್ನು ಜಾರಿಗೊಳಿಸುತ್ತವೆ.
- ಸ್ವತಂತ್ರ ವ್ಯವಸ್ಥೆ : ಸುಪ್ರೀಂ ಕೋರ್ಟ್ ಮತ್ತು ಹೈ ಕೋರ್ಟ್ ಗಳ ನ್ಯಾಯಾಧೀಶರಿಗೆ ಅಧಿಕಾರಾವಧಿಯ ಭದ್ರತೆ ಒದಗಿಸಲಾಗಿದೆ ಹಾಗೂ ಹೈ ಕೋರ್ಟ್ ಗಳ ಮತ್ತು ಸುಪ್ರೀಂ ಕೋರ್ಟ್ ನ ಎಲ್ಲಾ ವೆಚ್ಚಗಳನ್ನು ಏಕೀಕೃತ ನಿಧಿಯ ಮೇಲೆ ವಿಧಿಸಲಾಗುತ್ತದೆ.

## 8. ಮೂಲಭೂತ ಹಕ್ಕುಗಳು ಭಾಗ–III (ವಿಧಿ 12–35)

- ಸಮಾನತೆಯ ಹಕ್ಕುಗಳು (ವಿಧಿ 14–18)
- ಸ್ವಾತಂತ್ರ್ಯದ ಹಕ್ಕುಗಳು (ವಿಧಿ 19–22)
- ಶೋಷಣೆಯ ವಿರುದ್ಧದ ಹಕ್ಕುಗಳು (ವಿಧಿ 23–24)
- ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳು (ವಿಧಿ 25–28)
- ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು (ವಿಧಿ 29–30)
- ಸಾಂವಿಧಾನಿಕ ಪರಿಹಾರಗಳ ಹಕ್ಕು (ವಿಧಿ 32)
    - ರಾಜಕೀಯ ಪ್ರಜಾಪ್ರಭುತ್ವವನ್ನು ಉತ್ತೇಜಿಸುವುದು ಮೂಲಭೂತ ಹಕ್ಕುಗಳ ಗುರಿಯಾಗಿದೆ.
    - ಇವುಗಳನ್ನು ನ್ಯಾಯಾಲಯಗಳು ರಿಟ್ ಗಳ ಮೂಲಕ ಜಾರಿಗೊಳಿಸಬಹುದು.

## 9. ರಾಜ್ಯ ನೀತಿಯ ನಿರ್ದೇಶಕ ತತ್ವಗಳು : ಭಾಗ –IV (ವಿಧಿ 36 – 51)

- ಈ ತತ್ವಗಳು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವದ ಆದರ್ಶವನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿವೆ.
- ಕಲ್ಯಾಣ ರಾಜ್ಯವನ್ನು ಸ್ಥಾಪಿಸುವ ಗುರಿಯನ್ನು ಹೊಂದಿವೆ.
- ನ್ಯಾಯಾಂಗದ ವಿಚಾರಣೆಗೆ ಅರ್ಹವಲ್ಲ.
- ಈ ತತ್ವಗಳನ್ನು 3 ವರ್ಗಗಳಾಗಿ ವಿಭಾಗಿಸಲಾಗಿದೆ :

1. ಸಮಾಜವಾದಿ
2. ಗಾಂಧಿವಾದಿ
3. ಪ್ರಗತಿಪರ–ಬೌದ್ಧಿಕ

## 10. ಮೂಲಭೂತ ಕರ್ತವ್ಯಗಳು (ಒಟ್ಟೂ : 11) : ಭಾಗ IV-ಎ&ವಿಧಿ 51–ಎ

- ಮೂಲಭೂತ ಹಕ್ಕುಗಳನ್ನು ಹೊಂದಿರುವ ನಾಗರಿಕರಿಗೆ, ಅವರು ದೇಶ, ಸಮಾಜ ಮತ್ತು ಸಹ ನಾಗರಿಕರ ಕಡೆಗೆ ತಮ್ಮ ಕರ್ತವ್ಯಗಳ ಬಗ್ಗೆ ಜಾಗೃತರಾಗಿರಬೇಕು ಎಂದು ಮೂಲಭೂತ ಕರ್ತವ್ಯಗಳು ಜ್ಞಾಪಿಸುತ್ತವೆ.
- ಸ್ವರಣ್ ಸಿಂಗ್ ಸಮಿತಿಯ ಶಿಫಾರಸಿನ ಮೇರೆಗೆ 1976 ರ 42 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆಯ ಮೂಲಕ 10 ಮೂಲಭೂತ ಹಕ್ಕುಗಳನ್ನು ಸೇರಿಸಲಾಯಿತು.
- 2002 ರ 86 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆಯು ಮತ್ತೊಂದು ಮೂಲಭೂತ ಕರ್ತವ್ಯವನ್ನು ಸೇರಿಸಿದೆ.
- ನ್ಯಾಯಾಂಗದ ವಿಚಾರಣೆಗೆ ಅರ್ಹವಲ್ಲ.

## 11. ಜಾತ್ಯತೀತ ರಾಷ್ಟ್ರ

- ಸಂವಿಧಾನವು ಯಾವುದೇ ನಿರ್ದಿಷ್ಟ ಧರ್ಮವನ್ನು ರಾಷ್ಟ್ರದ ಅಧಿಕೃತ ಧರ್ಮವಾಗಿ ಎತ್ತಿಹಿಡಿಯುವುದಿಲ್ಲ.
- ಜಾತ್ಯಾತೀತತೆಯ ಪಾಶ್ಚಾತ್ಯ ಪರಿಕಲ್ಪನೆಯು ಧರ್ಮ ಮತ್ತು ಪ್ರಭುತ್ವದ ನಡುವಿನ ಸಂಪೂರ್ಣ ಪ್ರತ್ಯೇಕತೆಯನ್ನು ಸೂಚಿಸುತ್ತದೆ
- ಜಾತ್ಯಾತೀತತೆಯ ಭಾರತೀಯ ಪರಿಕಲ್ಪನೆಯು ಎಲ್ಲಾ ಧರ್ಮಗಳಿಗೆ ಗೌರವವನ್ನು ನೀಡುವುದು ಅಥವಾ ಎಲ್ಲಾ ಧರ್ಮಗಳನ್ನು ಸಮಾನವಾಗಿ ರಕ್ಷಿಸುವುದನ್ನು ಸೂಚಿಸುತ್ತದೆ
- 1976 ರ 42 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆಯ ಮೂಲಕ 'ಜಾತ್ಯತೀತ' ಪದವನ್ನು ಭಾರತೀಯ ಸಂವಿಧಾನದ ಪೀಠಿಕೆಗೆ ಸೇರಿಸಲಾಗಿದೆ.
- ಸಂವಿಧಾನದ ಪೀಠಿಕೆ, ವಿಧಿ 14–16, 25–30, 44ಗಳಲ್ಲಿ ಈ ತತ್ವವು ಪ್ರತಿಬಿಂಬಿತವಾಗಿದೆ.

## 12. ಸಾರ್ವತ್ರಿಕ ವಯಸ್ಕ ಮತದಾನ

- 1988 ರ 61 ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯ ಮೂಲಕ ಮತದಾನದ ವಯಸ್ಸನ್ನು 1989 ರಲ್ಲಿ 21 ವರ್ಷದಿಂದ 18 ವರ್ಷಕ್ಕೆ ಇಳಿಸಲಾಗಿದೆ.

## 13. ಏಕ ಪೌರತ್ವ

- ಭಾರತೀಯ ಸಂವಿಧಾನವು ಕೇವಲ ಏಕ ಪೌರತ್ವವನ್ನು ಒದಗಿಸುತ್ತದೆ – ಭಾರತೀಯ ಪೌರತ್ವ

## 14. ಸ್ವತಂತ್ರ ಸಂಸ್ಥೆಗಳು

- ಈ ಸಂಸ್ಥೆಗಳನ್ನು ಪ್ರಜಾಪ್ರಭುತ್ವ ವ್ಯವಸ್ಥೆಯ ರಕ್ಷಣಾ ತಂತ್ರಗಳು ಎಂದು ಸಂವಿಧಾನವು ಕರೆದಿದೆ.
- ಅವುಗಳೆಂದರೆ
  - ಚುನಾವಣಾ ಆಯೋಗ,
  - ಕೇಂದ್ರ ಲೋಕಸೇವಾ ಆಯೋಗ,
  - ಕಂಟ್ರೋಲರ್ ಮತ್ತು ಆಡಿಟರ್ ಜನರಲ್, ಇತ್ಯಾದಿ.

## 15. ತುರ್ತು ನಿಬಂಧನೆಗಳು

- ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ದೇಶದ ಸಂಯುಕ್ತ ರಚನೆಯು ಏಕೀಕೃತವಾಗಿ ಪರಿವರ್ತನೆಯಾಗುತ್ತದೆ.

  - ರಾಷ್ಟ್ರೀಯ ತುರ್ತು ಪರಿಸ್ಥಿತಿ (ವಿಧಿ 352)
  - ರಾಜ್ಯ ತುರ್ತು ಪರಿಸ್ಥಿತಿ (ರಾಷ್ಟ್ರಪತಿ ಆಡಳಿತ) :

1. ರಾಜ್ಯದಲ್ಲಿನ ಸಾಂವಿಧಾನಿಕ ವ್ಯವಸ್ಥೆಯ ವೈಫಲ್ಯ (ವಿಧಿ 356)
2. ಕೇಂದ್ರದ ನಿರ್ದೇಶನಗಳನ್ನು ಅನುಸರಿಸಲು ವಿಫಲ (ವಿಧಿ 365)

  - ಆರ್ಥಿಕ ತುರ್ತು ಪರಿಸ್ಥಿತಿ (ವಿಧಿ 360).

- ಇದು ಸಂಯುಕ್ತ ವ್ಯವಸ್ಥೆಯನ್ನು ಏಕೀಕೃತವಾಗಿ ಪರಿವರ್ತಿಸುತ್ತದೆ.

## 16. ಮೂರು ಹಂತದ ಸರ್ಕಾರ

- ಪ್ರಜಾಪ್ರಭುತ್ವ ವಿಕೇಂದ್ರೀಕರಣದ ಮೂಲಕ ಸರ್ಕಾರದ ಮೂರನೇ ಹಂತವನ್ನು ರೂಪಿಸುವ ಪಂಚಾಯತ್ ರಾಜ್ ಗಳನ್ನು ಸ್ಥಾಪಿಸುವುದು.

- 73ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ 1992 (ಗ್ರಾಮೀಣ ಮತ್ತು ಸ್ಥಳೀಯ ಸರ್ಕಾರ) ರ ಮೂಲಕ ಹೊಸ ಪರಿಚ್ಛೇದ 11 ಮತ್ತು ಭಾಗ IX ಅನ್ನು ಸೇರಿಸಲಾಗಿದೆ.
- 74ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ 1992 (ನಗರ ಸ್ಥಳೀಯ ಸಂಸ್ಥೆಗಳು) ರ ಮೂಲಕ ಹೊಸ ಪರಿಚ್ಛೇದ 11 ಮತ್ತು ಭಾಗ IX ಅನ್ನು ಸೇರಿಸಲಾಗಿದೆ.

## 17. ಸಹಕಾರ ಸಂಘಗಳು

- 2011 ರ 97 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆಯು ಸಹಕಾರ ಸಂಘಗಳಿಗೆ ಸಾಂವಿಧಾನಿಕ ಸ್ಥಾನಮಾನವನ್ನು ನೀಡಿತು
  - ಸಹಕಾರ ಸಂಘಗಳನ್ನು ರಚಿಸುವ ಮೂಲಭೂತ ಹಕ್ಕು (ವಿಧಿ – 19 (1) (ಸಿ)
  - ರಾಜ್ಯ ನಿರ್ದೇಶಕ ತತ್ವಗಳು : ಸಹಕಾರ ಸಂಘಗಳ ಪ್ರಚಾರ (ವಿಧಿ – 43–B)
  - ಹೊಸ ಅಧ್ಯಾಯವನ್ನು ಸೇರಿಸಲಾಗಿದೆ – ಭಾಗ IX B
- ಬಹುರಾಜ್ಯ ಸಹಕಾರ ಸಂಘಗಳನ್ನು ನಿಯಂತ್ರಿಸುವ ಅಧಿಕಾರವನ್ನು ಕೇಂದ್ರ ಸಂಸತ್ತು ಹೊಂದಿದೆ.

# 2. ಪರಿಚ್ಛೇದಗಳು

## 2A. ಪರಿಚ್ಛೇದ

### 1. ಒಂದನೇ ಪರಿಚ್ಛೇದ

ರಾಜ್ಯಗಳ ಹೆಸರುಗಳು, ಅವುಗಳ ಪ್ರಾದೇಶಿಕ ನ್ಯಾಯವ್ಯಾಪ್ತಿ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರಾದೇಶಿಕ ವ್ಯಾಪ್ತಿ.

### 2. ಎರಡನೇ ಪರಿಚ್ಛೇದ

ಕೆಲವು ಗಣ್ಯ ವ್ಯಕ್ತಿಗಳ ಸಂಬಳ, ವೇತನಗಳು, ಸವಲತ್ತುಗಳು – ರಾಷ್ಟ್ರಪತಿಗಳು, ರಾಜ್ಯಪಾಲರು, ಲೋಕಸಭೆ ಮತ್ತು ವಿಧಾನಸಭೆಯ ಸ್ಪೀಕರ್ ಹಾಗೂ ಉಪ ಸ್ಪೀಕರ್, ರಾಜ್ಯಸಭಾ ಮತ್ತು ವಿಧಾನ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಗಳ ನ್ಯಾಯಾಧೀಶರು, ಸಿಎಜಿ.

- ಸಂಸದರು, ಶಾಸಕರು, ಕೇಂದ್ರ ಮತ್ತು ರಾಜ್ಯ ಸಚಿವರು, ಚುನಾವಣಾ ಆಯುಕ್ತರು, ಕೇಂದ್ರ ಲೋಕಸೇವಾ ಆಯೋಗದ ಸದಸ್ಯರನ್ನು ಉಲ್ಲೇಖಿಸಲಾಗಿಲ್ಲ.

### 3. ಮೂರನೇ ಪರಿಚ್ಛೇದ

ಪ್ರಮಾಣ ಮತ್ತು ಪ್ರತಿಜ್ಞಾವಚನ : ಕೇಂದ್ರ ಮತ್ತು ರಾಜ್ಯ ಸಚಿವರು, ಶಾಸಕ ಮತ್ತು ಸಂಸದ ಸ್ಪರ್ಧಿಗಳು, ಶಾಸಕರು ಮತ್ತು ಸಂಸದರು, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಾಧೀಶರು, ಸಿಎಜಿ.

ಗಮನಿಸಿ : ಸಿಎಜಿ, ಸುಪ್ರೀಂ ಮತ್ತು ಹೈಕೋರ್ಟಿನ ನ್ಯಾಯಾಧೀಶರನ್ನು ಎರಡನೇ ಮತ್ತು ಮೂರನೇ ಪರಿಚ್ಛೇದಗಳಲ್ಲಿ ಸೇರಿಸಲಾಗಿದೆ.

- ಈ ಕೆಳಗಿನವರನ್ನು ಒಳಗೊಂಡಿಲ್ಲ : ರಾಷ್ಟ್ರಪತಿಗಳು ಮತ್ತು ಉಪರಾಷ್ಟ್ರಪತಿಗಳು, ಮತ್ತು ಲೋಕಸಭೆ, ವಿಧಾನಸಭೆಯ ಸ್ಪೀಕರ್ ಹಾಗೂ ಉಪ ಸ್ಪೀಕರ್, ರಾಜ್ಯಸಭೆ&ವಿಧಾನ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಚುನಾವಣಾ ಆಯೋಗ, ಕೇಂದ್ರ ಲೋಕಸೇವಾ ಆಯೋಗ, ರಾಜ್ಯ ಲೋಕಸೇವಾ ಆಯೋಗ.

### 4. ನಾಲ್ಕನೇ ಪರಿಚ್ಛೇದ

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ರಾಜ್ಯಸಭೆಯಲ್ಲಿ ಸ್ಥಾನಗಳ ಹಂಚಿಕೆ.

### 5. ಐದನೇ ಪರಿಚ್ಛೇದ

ಪರಿಶಿಷ್ಟ ಪ್ರದೇಶಗಳು ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ

### 6. ಆರನೇ ಪರಿಚ್ಛೇದ

ಅಸ್ಸಾಂ, ಮೇಘಾಲಯ, ತ್ರಿಪುರ ಮತ್ತು ಮಿಜೋರಾಂನಲ್ಲಿ ಬುಡಕಟ್ಟು ಪ್ರದೇಶಗಳ ಆಡಳಿತ.

### 7. ಏಳನೇ ಪರಿಚ್ಛೇದ

ಅಧಿಕಾರಗಳ ವಿಭಾಗ : ಪ್ರಸ್ತುತ (ಮೂಲತಃ)

1. ಒಕ್ಕೂಟ ಪಟ್ಟಿ –100 (97)
2. ರಾಜ್ಯ ಪಟ್ಟಿ – 61 (66)
3. ಸಹವರ್ತಿ ಪಟ್ಟಿ –52 (47)

### 8. ಎಂಟನೇ ಪರಿಚ್ಛೇದ

ಸಂವಿಧಾನದಿಂದ ಗುರುತಿಸಲ್ಪಟ್ಟ ಅಧಿಕೃತ ಭಾಷೆಗಳು – ಮೂಲತಃ 14 ಮತ್ತು ಈಗ 22 ಭಾಷೆಗಳು

- 71 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ 1992 – ಕೊಂಕಣಿ, ಮಣಿಪುರಿ , ನೇಪಾಳಿ
- 92ನೇ ಸಾಂ.ತಿ.ಕಾ. 2003 – ಬೋಡೋ, ಡೋಂಗ್ರಿ, ಮೈಥಿಲಿ, ಸಂತಾಲಿ
- 96 ನೇ ಸಾಂ.ತಿ.ಕಾ. 2011 – ಒಡಿಯಾ

**9. ಒಂಬತ್ತನೇ ಪರಿಚ್ಛೇದ–**

1 ನೇ ಸಾಂ.ತಿ.ಕಾ. 1951 ರಾಜ್ಯ ಮತ್ತು ಕೇಂದ್ರಗಳು ಸೇರಿಸಬಹುದಾದ ಭೂಸುಧಾರಣೆಗಳು ಮತ್ತು ಇತರ ವಿಷಯಗಳು

**10. ಹತ್ತನೇ ಪರಿಚ್ಛೇದ–** 52ನೇ ಸಾಂ.ತಿ.ಕಾ. 1985 ಪಕ್ಷಾಂತರ–ವಿರೋಧಿ ಕಾನೂನು ನಿಬಂಧನೆಗಳು

**11. ಹನ್ನೊಂದನೇ ಪರಿಚ್ಛೇದ–** 73ನೇ ಸಾಂ.ತಿ.ಕಾ. 1992 ಪಂಚಾಯತ್ ಗಳು :

- ವಿಧಿ – 243–ಜಿ – 29 ವಿಷಯಗಳು

**12. ಹನ್ನೆರಡನೇ ಪರಿಚ್ಛೇದ–** 74ನೇ ಸಾಂ.ತಿ.ಕಾ. 1992 ಪುರಸಭೆಗಳು :

- ವಿಧಿ – 243–W - 18 ವಿಷಯಗಳು

## 2B. ಸಂವಿಧಾನದ ಮೂಲಗಳು

### 1. ಭಾರತ ಸರ್ಕಾರ ಕಾಯಿದೆ, 1935

- ತುರ್ತು ನಿಬಂಧನೆಗಳು, ಆಡಳಿತಾತ್ಮಕ ವಿವರಗಳು, ಸಂಯುಕ್ತ ವ್ಯವಸ್ಥೆ, ರಾಜ್ಯಪಾಲರ ಹುದ್ದೆ, ನ್ಯಾಯಾಂಗ, ಲೋಕಸೇವಾ ಆಯೋಗ.

### 2. ಬ್ರಿಟಿಷ್ ಸಂವಿಧಾನ

- ಸಂಸದೀಯ ಸರ್ಕಾರ, ಕಾನೂನಿನ ನಿಯಮ, ರಿಟ್ ಗಳು, ಸಂಸದೀಯ ಸವಲತ್ತುಗಳು, ಏಕ ಪೌರತ್ವ, ಉಭಯ ಸದನ, ಶಾಸಕಾಂಗ ಕಾರ್ಯವಿಧಾನ.

### 3. ಅಮೆರಿಕದ ಸಂವಿಧಾನ

- ಮೂಲಭೂತ ಹಕ್ಕುಗಳು, ರಾಷ್ಟ್ರಪತಿಗಳ ಮೇಲೆ ದೋಷಾರೋಪಣೆ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಾಧೀಶರುಗಳನ್ನು ತೆಗೆದುಹಾಕುವಿಕೆ, ನ್ಯಾಯಾಂಗ ಸ್ವಾತಂತ್ರ್ಯ ಮತ್ತು ನ್ಯಾಯಾಂಗ ವಿಮರ್ಶೆ, ಉಪರಾಷ್ಟ್ರಪತಿಗಳ ಹುದ್ದೆ.

### 4. ಐರ್ಲೆಂಡ್ ಸಂವಿಧಾನ

- ರಾಜ್ಯ ನೀತಿ ನಿರ್ದೇಶಕ ತತ್ವಗಳು, ರಾಜ್ಯಸಭಾ ಸದಸ್ಯರ ನಾಮನಿರ್ದೇಶನ, ರಾಷ್ಟ್ರಪತಿಗಳ ಆಯ್ಕೆಯ ವಿಧಾನ. ಬಲವಾದ ಕೇಂದ್ರದೊಂದಿಗೆ ಒಕ್ಕೂಟ ವ್ಯವಸ್ಥೆ, ಕೇಂದ್ರದೊಂದಿಗೆ ಅವಶಿಷ್ಟ ಅಧಿಕಾರ, ರಾಜ್ಯಪಾಲರ ನೇಮಕ, ಸುಪ್ರೀಂ ಕೋರ್ಟ್ ನ ಸಲಹಾ ಅಧಿಕಾರದ ವ್ಯಾಪ್ತಿ.

### 5. ಆಸ್ಟ್ರೇಲಿಯಾ ಸಂವಿಧಾನ

- ಸಹವರ್ತಿ ಪಟ್ಟಿ, ವ್ಯಾಪಾರ ಮತ್ತು ವಾಣಿಜ್ಯ ಸ್ವಾತಂತ್ರ್ಯ, ಸಂಸತ್ತಿನ ಜಂಟಿ ಸಭೆ.

### 6. ಜರ್ಮನ್ ಸಂವಿಧಾನ

- ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮೂಲಭೂತ ಹಕ್ಕುಗಳ ಅಮಾನತು.

**7. ಸೋವಿಯತ್ ರಷ್ಯಾದ ಸಂವಿಧಾನ**

- ಪೀಠಿಕೆಯಲ್ಲಿನ ಮೂಲಭೂತ ಕರ್ತವ್ಯಗಳು, ನ್ಯಾಯದ ಆದರ್ಶಗಳು (ಸಾಮಾಜಿಕ, ರಾಜಕೀಯ, ಆರ್ಥಿಕ).

**8. ಫ್ರಾನ್ಸಿನ ಸಂವಿಧಾನ**

- ಪೀಠಿಕೆಯಲ್ಲಿನ ಗಣರಾಜ್ಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ.

**9. ದಕ್ಷಿಣ ಆಫ್ರಿಕಾದ ಸಂವಿಧಾನ**

- ಸಂವಿಧಾನದ ತಿದ್ದುಪಡಿ ಮತ್ತು ರಾಜ್ಯಸಭಾ ಸದಸ್ಯರ ಆಯ್ಕೆ.

**10. ಜಪಾನ್ ಸಂವಿಧಾನ**

- ಕಾನೂನಿನಿಂದ ಸ್ಥಾಪಿಸಲಾದ ಕಾರ್ಯವಿಧಾನ.

## 3. ಸಂವಿಧಾನದ ಪೀಠಿಕೆ

ಪೀಠಿಕೆಯು ಪಂಡಿತ್ ನೆಹರೂ ಅವರು ಮಂಡಿಸಿದ ಮತ್ತು ಸಂವಿಧಾನ ಸಭೆಯಿಂದ ಅಂಗೀಕರಿಸಲ್ಪಟ್ಟ 'ಉದ್ದೇಶಗಳ ನಿರ್ಣಯ'ವನ್ನು ಆಧರಿಸಿದೆ.

- ಪೀಠಿಕೆಯು ಶಾಸಕಾಂಗಕ್ಕೆ ಅಧಿಕಾರದ ಮೂಲವಲ್ಲ, ಶಾಸಕಾಂಗದ ಅಧಿಕಾರಗಳ ಮೇಲಿನ ನಿಷೇಧವಲ್ಲ.
- ಇದು ನ್ಯಾಯ ವಿಚಾರಣಾ ಯೋಗ್ಯವಲ್ಲ
- ಪೀಠಿಕೆಯನ್ನು ಇಲ್ಲಿಯವರೆಗೆ ಒಮ್ಮೆ ಮಾತ್ರ ತಿದ್ದುಪಡಿ ಮಾಡಲಾಗಿದೆ – 1976 ರಲ್ಲಿ, 42 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆಯ ಮೂಲಕ. ಈ ತಿದ್ದುಪಡಿಯು ಪೀಠಿಕೆಗೆ ಮೂರು ಹೊಸ ಪದಗಳನ್ನು ಸೇರಿಸಿದೆ – ಸಮಾಜವಾದಿ, ಜಾತ್ಯತೀತ ಮತ್ತು ಸಮಗ್ರತೆ

  - ಸಂವಿಧಾನದ ಗುರುತಿನ ಚೀಟಿ : ಎನ್. ಎ. ಪಾಲ್ಖಿವಾಲಾ
  - ನಮ್ಮ ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯದ ಜಾತಕ : ಕೆ. ಎಂ. ಮುನ್ಷಿ.

### ಸಂವಿಧಾನ ಪೀಠಿಕೆಯಲ್ಲಿ ಉಲ್ಲೇಖಿಸಿರುವ ಪ್ರಮುಖ ಪದಗಳು

#### 1. ಸಾರ್ವಭೌಮ :

- ಭಾರತವು ಯಾವುದೇ ಇತರ ರಾಷ್ಟ್ರದ ಮೇಲೆ ಅವಲಂಬಿತ ಪ್ರಭುತ್ವವಲ್ಲ. ಭಾರತವು ಸ್ವತಂತ್ರ ರಾಜ್ಯವಾಗಿದ್ದು, ತನ್ನದೇ ಆದ ವ್ಯವಹಾರಗಳನ್ನು ನಡೆಸಲು ಸ್ವತಂತ್ರವಾಗಿದೆ (ಆಂತರಿಕ ಮತ್ತು ಬಾಹ್ಯ)
  - ಭಾರತವು ಇತರೆ ರಾಜ್ಯಗಳು ಬಿಟ್ಟುಕೊಟ್ಟ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳಬಹುದು

#### 2. ಸಮಾಜವಾದ :

- ಭಾರತೀಯ ಬ್ರಾಂಡ್ ಸಮಾಜವಾದವು 'ಪ್ರಜಾಪ್ರಭುತ್ವ ಸಮಾಜವಾದ'(ಮಿಶ್ರ ಆರ್ಥಿಕತೆ) ಆಗಿದೆ ಮತ್ತು 'ಕಮ್ಯುನಿಸ್ಟ್ ಸಮಾಜವಾದ' (ಪ್ರಭುತ್ವ ಸಮಾಜವಾದ) ಅಲ್ಲ
- 1991 ಆರ್ಥಿಕ ಸುಧಾರಣೆಗಳ ನಂತರ ಪ್ರಭುತ್ವದ ಸಮಾಜವಾದಿ ಪಾತ್ರವು ದುರ್ಬಲಗೊಂಡಿದೆ.

#### 3. ಜಾತ್ಯತೀತ :

- 1976 ರ 42ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆಯಿಂದ ಸೇರಿಸಲಾಗಿದೆ. ಜಾತ್ಯತೀತತೆಯ ಧನಾತ್ಮಕ ಪರಿಕಲ್ಪನೆ ಅಂದರೆ, ನಮ್ಮ ದೇಶದ ಎಲ್ಲಾ ಧರ್ಮಗಳು ಸಮಾನ ಸ್ಥಾನಮಾನವನ್ನು ಹೊಂದಿವೆ ಮತ್ತು ಪ್ರಭುತ್ವದಿಂದ ಸಮಾನ ಬೆಂಬಲವನ್ನು ಪಡೆಯುತ್ತವೆ.

#### 4. ಪ್ರಜಾಪ್ರಭುತ್ವವಾದ :

- ಪೀಠಿಕೆಯಲ್ಲಿ ಉಲ್ಲೇಖವಾಗಿರುವ ಈ ಪದವು ರಾಜಕೀಯ ಪ್ರಜಾಪ್ರಭುತ್ವವನ್ನು ಮಾತ್ರವಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನು ಸಹ ಒಳಗೊಂಡಿದೆ.
- ಇದು ಜನಪ್ರಿಯ ಸಾರ್ವಭೌಮತ್ವದ ಸಿದ್ಧಾಂತವನ್ನು ಆಧರಿಸಿದೆ. ಭಾರತೀಯ ಪ್ರಜಾಸತ್ತಾತ್ಮಕ ರಚನೆಯು ಪರೋಕ್ಷ ಪ್ರಜಾಪ್ರಭುತ್ವದ ಮಾದರಿಯದಾಗಿದೆ.

## 5. ಗಣರಾಜ್ಯ :

- ನಮ್ಮ ಸಂವಿಧಾನ ಪೀಠಿಕೆಯಲ್ಲಿನ 'ಗಣರಾಜ್ಯ' ಎಂಬ ಪದವು ಪ್ರಭುತ್ವದ ಮುಖ್ಯಸ್ಥರು (ರಾಷ್ಟ್ರಪತಿ) ಯಾವಾಗಲೂ ದೇಶದ ಪ್ರಜೆಗಳಿಂದ ಚುನಾಯಿತರಾಗುತ್ತಾರೆ ಎಂದು ಸೂಚಿಸುತ್ತದೆ.
- ರಾಜಕೀಯ ಸಾರ್ವಭೌಮತ್ವವು ಎಲ್ಲ ಪ್ರಜೆಗಳ ಕೈಯಲ್ಲಿದೆಯೇ ಹೊರತು ಒಬ್ಬ ವ್ಯಕ್ತಿಯಲ್ಲಲ್ಲ. ಸಾರ್ವಜನಿಕ ಕಛೇರಿಗಳು ಎಲ್ಲರಿಗೂ ತೆರೆದಿವೆ. (ವಿಶೇಷ ವರ್ಗದ ಉಪಚಾರವಿಲ್ಲ)

## 6. ನ್ಯಾಯ :

ಪೀಠಿಕೆಯಲ್ಲಿನ 'ನ್ಯಾಯ' ಎಂಬ ಪದವು ಮೂರು ವಿಭಿನ್ನ ರೂಪಗಳನ್ನು ಒಳಗೊಂಡಿದೆ – ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ. ಇವುಗಳನ್ನು ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನೀತಿ ನಿರ್ದೇಶಕ ತತ್ವಗಳ ಮೂಲಕ ರಕ್ಷಿಸಲಾಗಿದೆ – (ರಾಜಕೀಯ ನ್ಯಾಯವನ್ನು ಮೂಲಭೂತ ಹಕ್ಕುಗಳ ಮೂಲಕ ಮತ್ತು ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ರಾಜ್ಯ ನಿರ್ದೇಶಕ ತತ್ವಗಳ ಮೂಲಕ)

ಸಾಮಾಜಿಕ ನ್ಯಾಯ + ಆರ್ಥಿಕ ನ್ಯಾಯ = ವಿತರಣಾ ನ್ಯಾಯ

### ಸಾಮಾಜಿಕ ನ್ಯಾಯ :

- ಎಲ್ಲರನ್ನು ಸಮಾನವೆಂದು ಪರಿಗಣಿಸುವುದು

**ಆರ್ಥಿಕ ನ್ಯಾಯ :**

- ಆರ್ಥಿಕ ಅಂಶಗಳ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡದಿರುವುದು

**ರಾಜಕೀಯ ನ್ಯಾಯ :**

- ಎಲ್ಲರಿಗೂ ಸಮಾನ ರಾಜಕೀಯ ಹಕ್ಕುಗಳು

## 7. ಸ್ವಾತಂತ್ರ್ಯ :

ವ್ಯಕ್ತಿಗಳ ಚಟುವಟಿಕೆಗಳ ಮೇಲೆ ನಿರ್ಬಂಧಗಳ ಅನುಪಸ್ಥಿತಿ

- ವೈಯಕ್ತಿಕ ವ್ಯಕ್ತಿತ್ವಗಳ ಬೆಳವಣಿಗೆಗೆ ಅವಕಾಶಗಳನ್ನು ಒದಗಿಸುವುದು
- ಇದರರ್ಥ ಒಬ್ಬರು ಇಷ್ಟಪಟ್ಟಿದ್ದನ್ನು ಮಾಡಲು ಪರವಾನಗಿ ಎಂದಲ್ಲ.

## ಪೀಠಿಕೆ ಸಂವಿಧಾನದ ಭಾಗವೇ?

- ಬೆರುಬರಿ v/s ಯೂನಿಯನ್ (1960) ಪ್ರಕರಣ :
  - ಪೀಠಿಕೆ ಸಂವಿಧಾನದ ಭಾಗವಲ್ಲ
- ಕೇಶವಾನಂದ ಭಾರತಿ (1973) ಪ್ರಕರಣ :
  - ಪೀಠಿಕೆ ಸಂವಿಧಾನದ ಭಾಗವಾಗಿದೆ
- ಎಲ್.ಐ.ಸಿ. Vs ಯೂನಿಯನ್ ಆಫ್ ಇಂಡಿಯಾ (1995) ಪ್ರಕರಣ :
  - ಪೀಠಿಕೆಯು ಸಂವಿಧಾನದ ಅವಿಭಾಜ್ಯ ಅಂಗವಾಗಿದೆ.

## ಪೀಠಿಕೆಯ ತಿದ್ದುಪಡಿ :

ಸಂವಿಧಾನದ ಮೂಲ ಲಕ್ಷಣಕ್ಕೆ ಧಕ್ಕೆಯಾಗದಂತೆ ಪೀಠಿಕೆಯನ್ನು ತಿದ್ದುಪಡಿ ಮಾಡಬಹುದು. 1976ರಲ್ಲಿ 42ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆಯ ಮೂಲಕ ಒಮ್ಮೆ ಮಾತ್ರ ತಿದ್ದುಪಡಿ ಮಾಡಲಾಗಿದೆ.

## 4. ಒಕ್ಕೂಟ ಮತ್ತು ಅದರ ಪ್ರದೇಶಗಳು

- ಸಂವಿಧಾನದ ಭಾಗ–I ರ ಅಡಿಯಲ್ಲಿ ವಿಧಿ 1–4
- ವಿಧಿ 1 ಭಾರತವನ್ನು ಹೀಗೆ ವಿವರಿಸುತ್ತದೆ :
  - ಭಾರತವನ್ನು ರಾಜ್ಯಗಳ ಸಂಯುಕ್ತ ಸಂಸ್ಥಾನವಲ್ಲ, 'ರಾಜ್ಯಗಳ ಒಕ್ಕೂಟ' ಎಂದು ಬಣ್ಣಿಸುತ್ತದೆ. (ಇದು ರಾಜ್ಯಗಳ ನಡುವಿನ ಒಪ್ಪಂದದ ಫಲಿತಾಂಶವಲ್ಲ ಮತ್ತು ಒಕ್ಕೂಟದಿಂದ ಬೇರ್ಪಡುವ ಯಾವುದೇ ಹಕ್ಕು ರಾಜ್ಯಗಳಿಗಿಲ್ಲ)

- ವಿಧಿ 1 ರ ಪ್ರಕಾರ, ಭಾರತದ ಪ್ರದೇಶವನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು :
  1. ರಾಜ್ಯಗಳ ಪ್ರದೇಶಗಳು,
  2. ಕೇಂದ್ರಾಡಳಿತ ಪ್ರದೇಶಗಳು
  3. ಭಾರತ ಸರ್ಕಾರ ಸ್ವಾಧೀನಪಡಿಸಿಕೊಂಡ ಪ್ರದೇಶಗಳು

- 'ಭಾರತದ ಭೂಪ್ರದೇಶ' ಎಂಬುದು 'ಭಾರತದ ಒಕ್ಕೂಟ'ಕ್ಕಿಂತ ವಿಶಾಲವಾದ ಅಭಿವ್ಯಕ್ತಿಯಾಗಿದೆ. ಭಾರತದ ಒಕ್ಕೂಟವು ಕೇವಲ ರಾಜ್ಯಗಳನ್ನು ಸೂಚಿಸುತ್ತದೆ. ಆದರೆ ಭಾರತದ ಪ್ರದೇಶವು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ಸ್ವಾಧೀನಪಡಿಸಿಕೊಳ್ಳಬಹುದಾದ ಪ್ರದೇಶಗಳನ್ನು ಸೂಚಿಸುತ್ತದೆ.

- ವಿಧಿ 2 ಸಂಸತ್ತಿಗೆ ಎರಡು ಅಧಿಕಾರಗಳನ್ನು ನೀಡುತ್ತದೆ:
  - I. ಹೊಸ ರಾಜ್ಯಗಳನ್ನು ದಾಖಲಿಸಿಕೊಳ್ಳುವ ಅಧಿಕಾರ (ಈಗಾಗಲೇ ಅಸ್ತಿತ್ವದಲ್ಲಿರುವಂಥವು)
  - II. ಹೊಸ ರಾಜ್ಯಗಳನ್ನು ಸ್ಥಾಪಿಸುವ ಅಧಿಕಾರ (ಈ ಮೊದಲು ಅಸ್ತಿತ್ವದಲ್ಲಿಲ್ಲದ ರಾಜ್ಯಗಳು)
  - III. ವಿಧಿ 3 ಸಂಸತ್ತಿಗೆ ಅಧಿಕಾರ ನೀಡುತ್ತದೆ :
    - ಭಾರತದ ಒಕ್ಕೂಟದ ಘಟಕಗಳ (ಅಂದರೆ, ರಾಜ್ಯಗಳು) ಆಂತರಿಕ ಮರುಹೊಂದಾಣಿಕೆ (ವಿಸ್ತೀರ್ಣದಲ್ಲಿ ಹೆಚ್ಚಳ, ಕಡಿಮೆ, ಬದಲಾವಣೆ ಇತ್ಯಾದಿ)

- ಈ ಉದ್ದೇಶಕ್ಕಾಗಿ ಮಂಡಿಸಲಾಗುವ ಮಸೂದೆಯು :
  1. ರಾಷ್ಟ್ರಪತಿಗಳ ಪೂರ್ವ ಶಿಫಾರಸು ಹೊಂದಿರಬೇಕು
  2. ಸಂಬಂಧಪಟ್ಟ ರಾಜ್ಯ ಶಾಸಕಾಂಗಕ್ಕೆ ಅದರ ಅಭಿಪ್ರಾಯಗಳಿಗಾಗಿ ಉಲ್ಲೇಖಿಸಬೇಕು

- ವಿಧಿ 2 ಮತ್ತು ವಿಧಿ 3 ರ ಅಡಿಯಲ್ಲಿ ಮಾಡಿದ ಕಾನೂನುಗಳನ್ನು ವಿಧಿ 368 ರ ಅಡಿಯಲ್ಲಿ ಸಾಂವಿಧಾನಿಕ ತಿದ್ದುಪಡಿಯೆಂದು ಪರಿಗಣಿಸಲಾಗುವುದಿಲ್ಲ.

- ಯಾವುದೇ ಪ್ರದೇಶವನ್ನು ವಿದೇಶಕ್ಕೆ ಬಿಟ್ಟುಕೊಡಬೇಕಾದರೆ, ಅದು ವಿಧಿ 3 ರ ಅಡಿಯಲ್ಲಿ ಕಾರ್ಯಸಾಧ್ಯವಿಲ್ಲ. ಇದಕ್ಕೆ ವಿಧಿ 368 ರ ಅಡಿಯಲ್ಲಿ ಸಾಂವಿಧಾನಿಕ ತಿದ್ದುಪಡಿಯ ಅಗತ್ಯವಿದೆ.

- 100 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆಯು ಬಾಂಗ್ಲಾದೇಶಕ್ಕೆ ಭಾರತದ ಕೆಲವು ಆವೃತ ವಲಯಗಳನ್ನು ಬಿಟ್ಟುಕೊಟ್ಟಿತು.

## 1956 ರ ನಂತರ ಅಸ್ತಿತ್ವಕ್ಕೆ ಬಂದ ಹೊಸ ರಾಜ್ಯಗಳು

1 1960 : ಮಹಾರಾಷ್ಟ್ರ, ಗುಜರಾತ್ – ಬಾಂಬೆಯಿಂದ

2 1963 : ನಾಗಾಲ್ಯಾಂಡ್

3 1966 : ಹರಿಯಾಣ, ಚಂಡೀಗಢ ಮತ್ತು ಹಿಮಾಚಲ ಪ್ರದೇಶ – ಪಂಜಾಬ್ ಪ್ರಾಂತ್ಯದಿಂದ

4 1972 : ಮಣಿಪುರ, ತ್ರಿಪುರ ಮತ್ತು ಮೇಘಾಲಯ.

5 1975 : ಸಿಕ್ಕಿಂ (36ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ)

6 1987 : ಮಿಜೋರಾಂ, ಅರುಣಾಚಲ ಪ್ರದೇಶ ಮತ್ತು ಗೋವಾ

7 2000 : ಛತ್ತೀಸ್ ಗಢ, ಉತ್ತರಾಖಂಡ ಮತ್ತು ಜಾರ್ಖಂಡ್

8 2014 : ತೆಲಂಗಾಣ

## ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಕಾಸ :

➢ ಸ್ವಾತಂತ್ರ್ಯ ನಂತರ ಭಾರತದೊಂದಿಗೆ 3 ರಾಜ್ಯಗಳ ಏಕೀಕರಣ :

ಹೈದರಾಬಾದ್ – ಪೋಲೀಸ್ ಕ್ರಮ

ಜುನಾಗಢ – ಜನಾಭಿಪ್ರಾಯ

ಕಾಶ್ಮೀರ – ಸೇರ್ಪಡೆಯ ಸಾಧನ

➢ ಧಾರ್ ಆಯೋಗ (1948) :

- ಭಾಷಾ ಅಂಶಕ್ಕಿಂತ ಹೆಚ್ಚಾಗಿ ಆಡಳಿತಾತ್ಮಕ ಅನುಕೂಲತೆಯ ಆಧಾರದ ಮೇಲೆ ರಾಜ್ಯಗಳ ಮರುಸಂಘಟನೆಗೆ ಶಿಫಾರಸು.

➢ JVP ಸಮಿತಿ (1948) :

- ರಾಜ್ಯಗಳ ಮರುಸಂಘಟನೆಗೆ ಆಧಾರವಾಗಿ ಭಾಷೆಯನ್ನು ಔಪಚಾರಿಕವಾಗಿ ತಿರಸ್ಕರಿಸಿತು

➢ ಫಜಲ್ ಅಲಿ ಆಯೋಗ (1955) :

- ಸೆಪ್ಟೆಂಬರ್ 1955 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು ಮತ್ತು ರಾಜ್ಯಗಳ ಮರುಸಂಘಟನೆಯ ಆಧಾರವಾಗಿ ಭಾಷೆಯನ್ನು ವಿಶಾಲವಾಗಿ ಅಂಗೀಕರಿಸಿತು. ಆದರೆ, 'ಒಂದು ಭಾಷೆ–ಒಂದು ರಾಜ್ಯ' ಸಿದ್ಧಾಂತವನ್ನು ತಿರಸ್ಕರಿಸಿತು.

➢ ಫಜಲ್ ಅಲಿ ಆಯೋಗದ ಆಧಾರದ ಮೇಲೆ, ರಾಜ್ಯಗಳ ಮರುಸಂಘಟನೆ ಕಾಯಿದೆ 1956 ಮತ್ತು 7 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆಗಳು ರಾಜ್ಯಗಳ ನಾಲ್ಕು ವಿಧಗಳ ವರ್ಗೀಕರಣವನ್ನು ರದ್ದುಗೊಳಿಸಿದವು ಮತ್ತು 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳ ರಚನೆಗೆ ಕಾರಣವಾದವು.

➢ ಭಾರತದಲ್ಲಿ ರಚಿಸಲಾದ ಮೊದಲ ಭಾಷಾವಾರು ರಾಜ್ಯ – 1953 ರಲ್ಲಿ ಆಂಧ್ರ ರಾಜ್ಯ